# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ ಸಂಖ್ಯೆ.27/100 ಬಾಣಸವಾಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 04-02-2023 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ವಿನೋದ್.ಕೆ.ಎನ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
2. ಶ್ರೀ ಶಂಕರಪ್ಪ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ ಸಂದೀಪ್, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.27/100
4. ಶ್ರೀ ಎ. ರಾಯಪ್ಪ (ಹಿರಿಯ ಆರೋಗ್ಯ ನಿರೀಕ್ಷಕರು)
5. ಶ್ರೀ ಆಯೇಷ ಲೀನ (SWD)
6. ಶ್ರೀ ಜೆ.ಸಿ. ಗೀತಾ (JE, BESCOM)
7. ಶ್ರೀ ಮಂಜುನಾಥ (JE, BWSSB)
8. ಶ್ರೀ ಹನುಮಂತೇ ಗೌಡ (ASI, Banasawadi Traffic Police Station)
9. ಶ್ರೀ ಅರವಿಂದ್ ಕುಮಾರ್ (ASI Ramamurthynagar)

**ಹಾಜರಿದ್ದ ಸದಸ್ಯರು/ ಸ್ಥಳೀಯ ನಿವಾಸಿಗಳು**

1. ಶ್ರೀ ಕ್ರಿಸ್ಟೋಫರ್
2. ಶ್ರೀ ಕರ್ನಲ್ ಗೋರ್ಪಡೆ
3. ಶ್ರೀ ಶ್ರೀಧರ ಎಂ.
4. ಶ್ರೀ ಕೆ. ಶಿವಯ್ಯ
5. ಶ್ರಿ ಜಿ. ನಾಗರಾಜು
6. ಶ್ರೀ ಕ್ರಿಸ್ಟೋಫರ್ ಎಸ್. ಕ್ರೂಜ್
7. ಶ್ರೀ ಪ್ರಶಾಂತ್
8. ಶ್ರೀ ಹಿಮಶೇಖರ್ ರೆಡ್ಡಿ
9. ಶ್ರೀ ಜೋಯೆಲ್ ಆನಂದ್ ಕುಮಾರ್
10. ಶ್ರೀ ಅಜಿತ್
11. ಶ್ರೀ ನಿಕ್ಸನ್ ಪಾಲ್
12. ಶ್ರೀ ಸತೀಶ್ ಗೌಡ
13. ಶ್ರೀ ಸ್ಯಾಮ್ಯುಯಲ್
14. ಶ್ರೀ ರಾಜೇಂದ್ರ ಕಾಂತ್
15. ಶೀ ಧಾಮೋಧರ್ ಭಟ್
16. ಶ್ರೀ ಜೋಸೆಫ್ ರಾಕೇಶ್
17. ಶ್ರೀ ಎನ್. ನಾಗಪ್ಪ
18. ಶ್ರೀ ಹೆಚ್.ಎ ನಂದಕುಮಾರ್
19. ಶ್ರೀಮತಿ ಮೀರಾ ವೆಂಕಟೇಶ್

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರುರವರು ಸ್ವಾಗತವನ್ನು ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂ | ಚರ್ಚಿಸಿದ ವಿಷಯಗಳು | ಸಂಬಂಧಪಟ್ಟ ಇಲಾಖೆ |
|---|---|---|
| 1 | ವಾರ್ಡ್ ವ್ಯಾಪ್ತಿಯಲ್ಲಿ "ನಮ್ಮ ಲೋಕಲ್" ಹೋಟೆಲನ್ನು ನಡೆಸುತ್ತಿರುವ ಮಾಲೀಕರು ರಸ್ತೆಯ ಫುಟ್‌ಪಾತನ್ನು ಅತಿಕ್ರಮಿಸಿದ್ದು, ಪಾದಚಾರಿಗಳಿಗೆ ಓಡಾಡಲು ತೊಂದರೆಯಾಗುತ್ತಿರುವುದರಿಂದ ಈ ಹೋಟೆಲ್ ಮುಂಭಾಗದ ಪಾದಾಚಾರಿ ಮಾರ್ಗದ ಒತ್ತುವರಿಯನ್ನು ತೆರವುಮಾಡಬೇಕಾಗಿ ಕ್ರಿಸ್ಟೋಫರ್ ಕ್ರೂಜ್ ರವರು ಸಭೆಯಲ್ಲಿ ತಿಳಿಸಿದರು. | ಬಿಬಿಎಂಪಿಯ ಹಿರಿಯ ಆರೋಗ್ಯ ಪರಿವೀಕ್ಷಕರು<br>ಮತ್ತು<br>ಸಹಾಯಕ ಅಭಿಯಂತರರು<br>ವಾರ್ಡ್ ಸಂಖ್ಯೆ27,<br>**SHI/**<br>**AE-W-27/100** |
| 2 | ಎ) ವಾರ್ಡ್ ವ್ಯಾಪ್ತಿಯಲ್ಲಿರುವ 8ನೇ ಬಿ ಮುಖ್ಯರಸ್ತೆಯಿಂದ 2ನೇ ಡಿ ಕ್ರಾಸ್‌ವರೆಗೂ Desilting ಮಾಡುವ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳಲು ಶ್ರೀ ಪ್ರಶಾಂತ್ ರವರು ಸಭೆಯಲ್ಲಿ ಕೋರಿದರು.<br><br>ಬಿ) ವಾರ್ಡ್ ವ್ಯಾಪ್ತಿಯ 5ನೇ ಕ್ರಾಸ್ ರಸ್ತೆ, (ಕಾನ್ವೆಂಟ್ ಶಾಲೆ ಮುಂಭಾಗದ) ರಸ್ತೆಯನ್ನು ಡಾಂಬರೀಕರಣ ಮಾಡಲು ಶ್ರೀಮತಿ ಅಂಜು ಮಿನಾಸ್ ರವರು ಸಭೆಯಲ್ಲಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP** |
| 3 | ಎ) 9ನೇ ಮುಖ್ಯರಸ್ತೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಯ ಎರಡು ಬದಿಗಳಲ್ಲಿ ವಾಹನಗಳನ್ನು ನಿಲ್ಲಿಸುತ್ತಿದ್ದು, ವಾಹನ ಸಂಚಾರಕರಿಗೆ ಹಾಗೂ ಪಾದಚಾರಿಗಳಿಗೆ ತೊಂದರೆಯಾಗುತ್ತಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಕ್ರಮವನ್ನು ಕೈಗೊಳ್ಳಬೇಕಾಗಿ ಶ್ರೀಮತಿ ಅಂಜು ಮಿನಾಸ್ ರವರು ಸಭೆಯಲ್ಲಿ ತಿಳಿಸಿದರು. | ರಾಮಮೂರ್ತಿನಗರ ಸಂಚಾರ ಪೊಲೀಸ್ ಠಾಣೆ<br>**Ramamurthy Nagar Police Station**<br>**Ramamurthy Nagar**<br>**(Traffic Police Department)** |
| | ಬಿ) ಬಾಣಸವಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ಸಬ್ ರಿಜಿಸ್ಟ್ರರ್ ಕಛೇರಿಯಲ್ಲಿ ಯಾವುದೇ ಪಾರ್ಕಿಂಗ್ ವ್ಯವಸ್ಥೆಯಿಲ್ಲದಿರುವುದರಿಂದ ಅಲ್ಲಿ ಬರುವವರೆಲ್ಲರು ರಸ್ತೆಗಳಲ್ಲಿ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಸ್ಥಳೀಯರಿಗೆ ತೊಂದರೆಯಾಗುತ್ತಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಕ್ರಮವನ್ನು ಕೈಗೊಳ್ಳಬೇಕಾಗಿ ಶ್ರೀಮತಿ ಮೀರಾ ರವರು ಸಭೆಯಲ್ಲಿ ತಿಳಿಸಿದರು. | ಬಾಣಸವಾಡಿ ಸಂಚಾರ ಪೊಲೀಸ್ ಠಾಣೆ<br>**Bansawadi Police Station**<br>**(Traffic Police Department)** |

| | | |
|---|---|---|
| 4 | ಎ) ವಾರ್ಡ್ ವ್ಯಾಪ್ತಿಯ ಚಂದ್ರಮ್ಮ ಲೇಔಟ್‌ನ 4ನೇ ಮುಖ್ಯರಸ್ತೆಯಲ್ಲಿ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಭೆಯಲ್ಲಿ ಈ ಹಿಂದೆ ಮನವಿಯನ್ನು ಸಲ್ಲಿಸಿದರೂ ಸಹ ಇದುವರೆವಿಗೆ ಕ್ರಮ ಕೈಗೊಳ್ಳದೇ ಇರುವ ಬಗ್ಗೆ ಸಭೆಯಲ್ಲಿ ಮತ್ತೊಮ್ಮೆ ಸಭೆಗೆ ತಿಳಿಸಿದರು. ಈ ಬಗ್ಗೆ ಸಹಾಯಕ ಅಭಿಯಂತರರು ಪ್ರತಿಕ್ರಿಯಿಸಿ, ಸದರಿ ಪ್ರದೇಶಗಳಿಗೆ ಅಮೃತ ನಗರೋತ್ಥಾನ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ, ಅನುಮೋದನೆಗೆ ಸಲ್ಲಿಸಿಲಾಗಿದ್ದು, ಟೆಂಡರ್ ಪ್ರಕಿಯೆ ನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP** |
| | ಬಿ) ವಾರ್ಡ್ ವ್ಯಾಪ್ತಿಯ ಚಂದ್ರಮ್ಮ ಲೇಔಟ್‌ನ 4ನೇ ಮುಖ್ಯರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯು ಜಲಮಂಡಳಿಯಿಂದ ಸಮರ್ಪಕವಾಗಿ ನಿರ್ವಹಿಸಬೇಕಾಗಿದ್ದು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಲು ಸ್ಥಳಿಯ ನಿವಾಸಿಗಳು ಕೋರಿದರು. | ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ<br>ಸಕಾಇಂ/ಸ.ಇಂ |
| | ಸಿ) ವಾರ್ಡ್ ವ್ಯಾಪ್ತಿಯ 9ನೇ ಮುಖ್ಯರಸ್ತೆಯಲ್ಲಿ ಸಮರ್ಪಕವಾಗಿ ನೀರನ್ನು ಪೂರೈಸುತ್ತಿಲ್ಲವಾದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕಾಗಿ ಶ್ರೀಮತಿ ಮೀರಾರವರು ಸಭೆಯಲ್ಲಿ ಸೂಚಿಸಿದರು. | ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ<br>ಸಕಾಇಂ/ಸ.ಇಂ |
| 5 | ವಾರ್ಡ್ ವ್ಯಾಪ್ತಿಯ 8ನೇ ಮುಖ್ಯರಸ್ತೆಯ ನಂ.217 1ನೇ ಬ್ಲಾಕ್‌ನಲ್ಲಿನ ಮರವು ಹೆಮ್ಮರವಾಗಿ ಬೆಳೆದಿರುವುದರಿಂದ ಮರದ ಕೊಂಬೆ ರೆಂಬೆಗಳನ್ನು ಕತ್ತರಿಸಲು ಕ್ರಮಕೈಗೊಳ್ಳಬೇಕಾಗಿ ಶ್ರೀ ಪ್ರಶಾಂತ್ ರವರು ಸಭೆಯಲ್ಲಿ ತಿಳಿಸಿದರು. | **Forest Department** |
| 6 | ವಾರ್ಡ್ ವ್ಯಾಪ್ತಿಯ 3ನೇ ಅಡ್ಡರಸ್ತೆಯಲ್ಲಿ ಮೆಟ್ರೋ ಕಾಮಗಾರಿಯನ್ನು ನಿರ್ವಹಿಸಲು ಕೇಬಲ್‌ಗಳನ್ನು ಅಳವಡಿಸುತ್ತಿರುವ ಬಗ್ಗೆ ನಿಖರವಾದ ಮಾಹಿತಿಯನ್ನು ಹಿಂದಿನ ಸಭೆಯಲ್ಲಿ ಕೋರಲಾಗಿದ್ದು, ಅದರಂತೆ ಸಂಬಂಧಪಟ್ಟ ಗುತ್ತಿಗೆದಾರರು ಸಭೆಗೆ ಹಾಜರಾಗಿ ವಿವರಣೆ ನೀಡಿದರು. | **Bangalore Metro Rail Corporation Ltd** |
| 7 | ವಾರ್ಡ್ ವ್ಯಾಪ್ತಿಯ ಹೆಚ್.ಆರ್.ಬಿ.ಆರ್ 1ನೇ ಬ್ಲಾಕ್‌ನ 2ನೇ ಕೆ ಕ್ರಾಸ್‌ನಲ್ಲಿ ಬೃಹತ್ ನೀರುಗಾಲುವೆ ವತಿಯಿಂದ ಹೂಳೆತ್ತುವ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, ನಿರಂತರವಾಗಿ ಕಾಮಗಾರಿಯನ್ನು ನಿರ್ವಹಿಸದೇ ವಿಳಂಭ | ಬೃಹತ್ ನೀರುಗಾಲುವೆ<br>**(SWD)** |

| | | |
|---|---|---|
| | ಮಾಡುತ್ತಿದ್ದು, ಇದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೊಳ್ಳೆಗಳು ಹೆಚ್ಚಾಗುತ್ತಿದ್ದು, ಇದರಿಂದ ಸ್ಥಳೀಯ ನಿವಾಸಿಗಳಿಗೆ ರೋಗ ರುಜಿನಗಳು ಹರಡುವ ಸಂಭವವಿರುತ್ತದೆ ಎಂದು ಈ ಬಗ್ಗೆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸಮರ್ಪವಾಗಿ ಕಾರ್ಯನಿರ್ವಹಿಸಲು ಶ್ರೀ ಕರ್ನಲ್ ಘೋರ್ಪಡೆ ರವರು ಹಾಗೂ ಕ್ರಿಸ್ಟೋಫರ್ ಕ್ರೂಜ್ ರವರು ಸಭೆಯಲ್ಲಿ ದೂರಿದರು. | |
| 8 | ಪಾಲಿಕೆಯ ಪೂರ್ವ ವಲಯದ ಕಲ್ಯಾಣ ಇಲಾಖೆಯಿಂದ 2021-22ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ಮೂಲಭೂತ ಸೌಕರ್ಯಗಳೊಂದಿಗೆ ಹಲವಾರು ಸೌಲಭ್ಯಗಳನ್ನು ಒದಗಿಸಲಾಗುತ್ತಿದ್ದು, ಸದರಿ ಸೌಲಭ್ಯಗಳನ್ನು ಪಾರದರ್ಶಕವಾಗಿ ಸಾರ್ವಜನಿಕರಿಗೆ ತಲುಪಿಸುವ ನಿಟ್ಟಿನಲ್ಲಿ ಕಛೇರಿಗೆ ಸ್ವೀಕೃತವಾಗಿರುವ ಅರ್ಜಿಗಳನ್ನು ವಾರ್ಡ್ ಸಮಿತಿಯ ಮುಂದೆ ಮಂಡಿಸಿ, ವಾರ್ಡ್ ಸಮಿತಿಯ ಅನುಮೋದನೆ ಅವಶ್ಯಕತೆ ಇರುತ್ತದೆ ಎಂದು ಕಲ್ಯಾಣ ಇಲಾಖೆಯ ಸಹ ಕಂದಾಯ ಅಧಿಕಾರಿ (ಕಲ್ಯಾಣ) ಪೂರ್ವ ರವರು ಕಲ್ಯಾಣ ಕಾರ್ಯಕ್ರಮದ ಅಡಿಯಲ್ಲಿ ಶಾಲಾ ಮಕ್ಕಳಿಗೆ ಶುಲ್ಕವನ್ನು ಪಾವತಿಸಲು ಗಗನ್.ಟಿ.ಎಂ, ನಂ.04, 4ನೇ ಕ್ರಾಸ್, ಗಂಗಮ್ಮ ದೇವಸ್ಥಾನ ರಸ್ತೆ, ಎ.ಕೆ.ಕಾಲೋನಿ, ದೊಡ್ಡಬಾಣಸವಾಡಿ, ಬೆಂಗಳೂರು ಎಂಬ ವಿದ್ಯಾರ್ಥಿಗೆ ಪಾವತಿಸಲು ಸಭೆಯ ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದರು. | ಅದರಂತೆ ಸದರಿ ಅರ್ಜಿಯನ್ನು ಪರಿಶೀಲಿಸಲಾಗಿದ್ದು, ಸಭೆಯ ಎಲ್ಲಾ ಸದಸ್ಯರು ಹಾಗೂ ಅಧ್ಯಕ್ಷರ ಒಮ್ಮತದೊಂದಿಗೆ ಅರ್ಹ ಫಲಾನುಭವಿಗೆ ಶಾಲಾ ಶುಲ್ಕವನ್ನು ಪಾವತಿಸಲು ಅನುಮೋದಿಸಿ, ಕಲ್ಯಾಣ ಇಲಾಖೆಯವರಿಗೆ ಸಭೆಯ ನಡವಳಿಗಳ ಸಹಿಯೊಂದಿಗೆ ಶಿಫಾರಸ್ಸು ಮಾಡಲಾಯಿತು.<br>(ಸಹ ಕಂದಾಯ ಅಧಿಕಾರಿ (ಕಲ್ಯಾಣ) ಪೂರ್ವ) ರವರು ಮುಂದಿನ ಕ್ರಮ ವಹಿಸುವುದು. |

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ವಾರ್ಡ್ ಕಮಿಟಿ ಸಭೆಗೆ ಗೈರು ಹಾಜರಾಗಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಕಡ್ಡಾಯವಾಗಿ ಮುಂದಿನ ಸಭೆಗೆ ಹಾಜರಿರಲು ಕ್ರಮ ವಹಿಸಲು ಸೂಚಿಸಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

04.2.2023

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

K.M. 6/2/23

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

**ಪ್ರತಿಯನ್ನು**

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ/ಕಛೇರಿ ಕಡತಕ್ಕೆ.